

# ಚೌಕಿದಾರರ ಚೌಕಿಯಲ್ಲಿ...

ಮಧ್ಯರಾತ್ರಿಯ ಕಲ್ಲು ಕರಗುವ ಸಮಯದಲ್ಲಿ ಪ್ರಧಾನಮಂತ್ರಿಯವರ ಗೃಹಕಚೇರಿಯಲ್ಲಿ ಮಂತ್ರಾಲೋಚನೆ ನಡೆಯುತ್ತಿದ್ದ ಸಮಯದಲ್ಲೇ, ಜನಪಥ್ ರಸ್ತೆಯ 10ನೇ ನಂಬರಿನ ನಿವಾಸದಲ್ಲೂ ಸಭೆ ನಡೆದಿತ್ತು. ಆ ಸಭೆಯ ವಿವರಗಳನ್ನು ನಮ್ಮ ವರದಿಗಾರ **ಪ್ರವೀಣ ಕುಲಕರ್ಣಿ** ಅವರ ಕಿವಿಗೆ ಬಿದ್ದು, ಯಥಾವತ್ ಇಲ್ಲಿ ನಿರೂಪಿಸಿದ್ದಾರೆ.

**ಪ್ರಧಾನಿ ನಿವಾಸ, ನವದೆಹಲಿ**
**ಬುಧವಾರ ಮಧ್ಯರಾತ್ರಿ 12**

ಪ್ರಧಾನಿ ಮೋದಿಯವರು ತಮ್ಮ ಗೃಹ ಕಚೇರಿ ಹೊರಭಾಗದಲ್ಲಿ ಚೌಕಿದರಾರು ಅತ್ತಿಂದಿತ್ತ ಗಸ್ತು ತಿರುಗುತ್ತಿದ್ದ ರೀತಿಯಲ್ಲೇ ಒಳಗೆ ಒಂದೇಸಮನೆ ಶತಪಥ ಹಾಕುತ್ತಿದ್ದರು. ಅದೇ ವೇಳೆಗೆ ಅಮಿತ್ ಶಾ, ರಾಮ್ ಮಾಧವ್ ಹಾಗೂ ಅಜಿತ್ ಡೋಭಾಲ್ ಒಳ ಪ್ರವೇಶಿಸಿದರು.

'ಆಯಿಯೇ, ಆಯಿಯೇ' ಎನ್ನುತ್ತಾ, ಅವರನ್ನೆಲ್ಲ ಬರಮಾಡಿಕೊಂಡ ಮೋದಿ ನೇರವಾಗಿ ಮಾತಿಗೆ ಕುಳಿತರು.

ಮೋದಿ: ಡೋಭಾಲ್‌ಜಿ, ರಫೇಲ್ ಡೀಲ್‌ನ ಎಲ್ಲ ಡಾಕ್ಯುಮೆಂಟ್‌ಗಳು ಸಿಕ್ರೇಟ್ ಜಾಗದಲ್ಲಿ ಸೆಕ್ಯೂರ್ ಆಗಿವೆಯಲ್ಲವೇ? ನಾವಲ್ಲಿ ಚೌಕಿದಾರ್‌ಗಳನ್ನೂ ಹಾಕಿದ್ದೆವಲ್ಲವೇ?

ಡೋಭಾಲ್: ಹೌದು, ಸಾರ್ ಡಾಕ್ಯುಮೆಂಟ್‌ಗಳೆಲ್ಲ ಸೆಕ್ಯೂರ್ ಆಗಿವೆ. ನಮ್ಮ ಚೌಕಿದಾರ್‌ಗಳೇನೂ ಚೋರ್‌ಗಳಲ್ಲ. ಲೀಕ್ ಆಗಿದ್ದು ಅವುಗಳ ಝೆರಾಕ್ಸ್ ಪ್ರತಿಗಳಷ್ಟೆ. ಅವುಗಳನ್ನೂ ರಕ್ಷಣಾ ಇಲಾಖೆಯ ಕಡತಗಳಲ್ಲಿ ಉಳಿಸಬಾರದಿತ್ತು.

ಮೋದಿ: ಝೆರಾಕ್ಸ್ ಪ್ರತಿಗಳು ಕಳುವಾದರೂ ಮಾಹಿತಿ ಸೋರಿಕೆ ಆಗುತ್ತೆ ಅಂತ ಗೊತ್ತಾಗಲಿಲ್ವೇನ್ರಿ? ರಕ್ಷಣಾ ಇಲಾಖೆಯ ಚೌಕಿದಾರರು ಚೋರ್‌ಗಳಲ್ಲ ಅಂತ ಹೇಗೆ ನಂಬಿದ್ರೀ?

ಡೋಭಾಲ್: .....

ಮೋದಿ: ಝೆರಾಕ್ಸ್ ಪ್ರತಿಗಳು ರಕ್ಷಣಾ ಇಲಾಖೆಯಲ್ಲೂ ಇರಬೇಕಾಗುತ್ತದೆ ಎಂದು ಪಾರ್ಲಿಮೆಂಟರಿ ಬೋರ್ಡ್ ಮೀಟಿಂಗ್‌ನಲ್ಲಿ ಒತ್ತಾಯಿಸಿದ್ದು ಯಾರು ಅಮಿತ್‌ಜಿ?

ಶಾ: ನಿತಿನ್ ಗಡ್ಕರಿ ಹಾಗೂ ಶಿವರಾಜ್ ಸಿಂಗ್ ಸಾರ್. ಸುಷ್ಮಾಜಿ ಮತ್ತು ತಾವರ್‌ಚಂದ್ ಸಪೋರ್ಟ್ ಮಾಡಿದ್ರು.

(ಡೋಭಾಲ್, ರಾಮ್ ಮಾಧವ್ ಅವರ ಕಿವಿಯಲ್ಲಿ: ಗಡ್ಕರಿ, ಶಿವರಾಜ್ ಸಿಂಗ್ ಅವರೆಲ್ಲ ನಿಮ್ಮ ಪಾರ್ಟಿ ಲೀಡರ್‌ಗಳೇ ಅಲ್ವಾ?

ರಾಮ್ ಮಾಧವ್, ಪಿಸು ಮಾತಿನಲ್ಲಿ: ಹೌದು, ಆದರೆ, ಅವ್ರೂ ಪಿಎಂ ಕ್ಯಾಂಡಿಡೇಟ್ಸ್ ಕಣ್ರೀ)

ಮೋದಿ: ಡಾಕ್ಯುಮೆಂಟ್‌ಗಳು ಸೋರಿಕೆಯಾಗಿದ್ದು ಹೇಗೆ ಎನ್ನುವುದನ್ನು ಪತ್ತೆ ಮಾಡಿಸಿದ್ದೀರಾ?

ಡೋಭಾಲ್: ರಾಹುಲ್ ಗಾಂಧಿ ಪ್ರೆಸ್‌ಮೀಟ್‌ನಲ್ಲಿ ಮಾತನಾಡುವಾಗ ಐದು ತಿಂಗಳಲ್ಲಿ ನಾಲ್ಕು ಸಲ ರಫೇಲ್ ಯುದ್ಧ ವಿಮಾನಗಳ ಪ್ರೈಸ್ ಬದಲಿಸಿದ್ದಾರೆ ಸಾರ್. ಅದನ್ನೇ ಇಟ್ಕೊಂಡು ಅವ್ರು ಹೇಳ್ತಿರೋದೆಲ್ಲ ಸುಳ್ಳೇ ಸುಳ್ಳು ಅಂತ ಅಟ್ಯಾಕ್ ಮಾಡಬಹುದಲ್ಲ?

ಮೋದಿ: ದಿಕ್ಕು ತಪ್ಪಿಸಬೇಡಿ. ನಾನು ಕೇಳಿದ್ದೇನು, ನೀವು ಹೇಳ್ತಿರೋದೇನು?

ಡೋಭಾಲ್: ಸಾರ್, ನಾನೇ ಪತ್ರಿಕೆಗಳಲ್ಲಿ ಓದಿದೆ. ನೀವು ದಿನದ 23 ಗಂಟೆಗಳ ಕೆಲಸದ ಬಳಿಕ 10 ನಿಮಿಷ ನಿದ್ದೆ ಹೋದಾಗ ನೆಹರೂ ಬಂದು ಡಾಕ್ಯುಮೆಂಟ್ ಕದ್ದೊಯ್ದರಂತೆ?

(ಮೋದಿಯವರು ಸಿಟ್ಟಿನಿಂದ ಸಿಡಿಮಿಡಿಗೊಳ್ಳುತ್ತಾ ಏಳಲು ಅನುವಾದರು. ಅವರನ್ನು ರಾಮ್ ಮಾಧವ್ ಸಮಾಧಾನಪಡಿಸಿದರು)

ರಾಮ್ ಮಾಧವ್: ಸಾರ್, ನಮ್ ಚೌಕಿದಾರರ ಪ್ರಕಾರ, ಯಶವಂತ್ ಸಿನ್ಹಾ, ಅರುಣ್ ಶೌರಿ ಮತ್ತು ಪ್ರಶಾಂತ್ ಭೂಷಣ್ ಅವರು ಸೌತ್ ಬ್ಲಾಕ್ ಸುತ್ತಮುತ್ತ ಹಲವು ಸಲ ಓಡಾಡಿದ್ದಾರೆ. ಹಾಗೆ ಓಡಾಡುವಾಗ ಅವರು 'ಮೈ ಭೀ ಚೌಕಿದಾರ್' ಟೀ–ಶರ್ಟ್ ಧರಿಸಿದ್ದರಿಂದ ಸುಲಭವಾಗಿ ಗುರುತಿಸಲು ಆಗಿಲ್ಲ. ಈಗ ಅವರೇನೇನು ಒಯ್ದಿದ್ದಾರೆ ಎನ್ನುವುದರ ತನಿಖೆಗೆ ಹೇಳಿದ್ದೇನೆ ಸಾರ್.

ಮೋದಿ: ಡ್ಯಾಮೇಜ್ ಕಂಟ್ರೋಲ್ ಮಾಡೋದು ಹೇಗೆ ಹೇಳ್ರಿ?

ರಾಮ್ ಮಾಧವ್: ಬಾಲಾಕೋಟ್ ದಾಳಿ ಚೆನ್ನಾಗಿ ವರ್ಕೌಟ್ ಆಗಿತ್ತು. ಆ ಯಡ್ಯೂರಪ್ಪ...

ಮೋದಿ: ಅವ್ರ ಹೆಸರು ನನ್ಮುಂದೆ ಎತ್ಬ್ಯಾಡ್ರೀ. ಬುದ್ಧಿ ಇದೆಯೇನ್ರೀ ಅವ್ರಿಗೆ? ನಮ್ಮ ಕಡೆ ತಿರುಗಿದ್ದ 3–4 % ಓಟನ್ನು ಅರೆಕ್ಷಣದಲ್ಲಿ ಎದುರಾಳಿಗಳ ಬುಟ್ಟಿಗೆ ಸುರಿದುಬಿಟ್ರಲ್ರೀ ಅವ್ರು. ಅಮಿತ್‌ಜಿ, ಡಿನಾಯ್ ದಿ ಟಿಕೆಟ್ ಟು ಹಿಮ್ ಆ್ಯಂಡ್ ಟೀಚ್ ಹಿಮ್ ಎ ಲೆಸನ್.

ಶಾ: ಸಾರ್, ಅವ್ರೀಗ ಅಸೆಂಬ್ಲಿ ಮೆಂಬರ್ರು. ಅಪೋಜಿಷನ್ ಲೀಡರ್ರು. ಆಕಾಂಕ್ಷಿಗಳ ಪಟ್ಟಿಯಲ್ಲಿ ಅವರ ಹೆಸರಿಲ್ಲ. ಅವರ ಮಗ ಎಂ.ಪಿ. ಆಗಿದ್ದಾರೆ. ಯಡ್ಯೂರಪ್ಪ ಅವರಿಗೆ ಸರಿಯಾಗಿ ವಾರ್ನ್ ಮಾಡಿದ್ದೀನಿ ಸಾರ್.

ಮೋದಿ: ಏನ್ ವಾರ್ನಿಂಗ್‌ರೀ ಡ್ಯಾಮೇಜ್ ಎಲ್ಲಾ ಆದ್ಮೇಲೆ? ಹೋಗ್ಲಿ ಬೇರೆ ಯಾವ್ಯಾವ ಪಾರ್ಟಿ ಜತೆ ಮಾತನಾಡಿದ್ದೀರಿ?

ರಾಮ್ ಮಾಧವ್: ನಿನ್ನೆ ತೆಲಂಗಾಣದ ಕೆಸಿಆರ್ ಸಿಕ್ಕಿದ್ರು. ಹಂಗ್ ಪಾರ್ಲಿಮೆಂಟ್ ಆದ್ರೆ ನಮ್ಮ ಸಪೋರ್ಟ್ ಹೆಂಗಿದ್ರೂ ನಿಮ್ಗೆ ಅಂದಿದ್ದಾರೆ. ನವೀನ್ ಪಟ್ನಾಯಕ್ ಕೂಡ ಒಪ್ಪುವಂತೆ ಕಾಣ್ತಾರೆ. 2–3 ಸೀಟು ಕಡಿಮೆ ಬಿದ್ರೆ ಸಪೋರ್ಟ್ ಕೊಡೋಕೆ ನಾನೂ ರೆಡಿ ಅಂದಿದ್ದಾರೆ ಕರ್ನಾಟಕದ ಗೌಡ್ರು. ಅವ್ರು, ಅವ್ರ ಇಬ್ಬರು ಮೊಮ್ಮಕ್ಕಳು ಎಂ.ಪಿ ಆಗ್ತಿರೋದ್ರಿಂದ ಅವರ ಪಾರ್ಟಿಯನ್ನೂ ನಂಬಬೌದು.

ಶಾ: ಕೆಸಿಆರ್ ಹಾಗೂ ಗೌಡರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ.